ಓ.ಎಸ್. 146/2017 ಡಿ.ಡಬ್ಲ್ಯೂ: 2

ದಿನಾಂಕಃ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಬಿ.ಎ.ಎಸ್ ಅವರಿಂದ–

7. ನಾನು ಈ ಪ್ರಕರಣದ ವಿಚಾರ ತಿಳಿದುಕೊಂಡಿದ್ದೇನೆ. ನನಗೆ ಓದಲು–ಬರೆಯಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರವನ್ನು ಕನ್ನಡ ಭಾಷೆಯಲ್ಲಿ ಬರೆಯಿಸಿ ಹಾಕಿಸಿರುತ್ತೇನೆ. ಅದರ ವಿಚಾರಗಳನ್ನು ಅದನ್ನು ತಯಾರಿಸಿರುವ ವಕೀಲರಿಂದ ಓದಿಸಿ ತಿಳಿದುಕೊಂಡಿದ್ದೇನೆ. ಈಗಾಗಲೇ ಭಾಗ ಆಗಿದೆ ಎಂದು ನಾನು ಹೇಳಿದ್ದು, ಖಾತೆಗಳು ಅವರವರ ಹೆಸರಿಗೆ ಆಗಿರುವ ಆಧಾರದ ಮೇಲೆ ನಾನು ಉಭಯ ಪಕ್ಷಗಾರರಲ್ಲಿ ಭಾಗ ಆಗಿದೆ ಎಂದು ಹೇಳಿದ್ದೇನೆ.

8. ನಾನು 1981–82 ರ ಆರ್.ಟಿ.ಸಿ ಗಳನ್ನು ನೋಡಿದ್ದೇನೆ. ಸದರಿ ಆರ್.ಟಿ.ಸಿ. ಗಳ ಪ್ರಕಾರ ಬಾಯಿ ಮಾತಿನಲ್ಲಿ ವಿಭಾಗ ಆಗಿದೆ ಎಂದು ನಮೂದಿಸಲಾಗಿದೆ. ಈ ದಾವದಲ್ಲಿರುವ ಸ್ವತ್ತುಗಳೆಲ್ಲಾ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವ ಸ್ವತ್ತುಗಳಲ್ಲಿ ವಾದಿಯರಿಗೆ ಅರ್ಧ ಹಿಸ್ಸೆ ಮತ್ತು ಪ್ರತಿವಾದಿಗಳಾದ ನಮಗೆ ಅರ್ಧ ಹಿಸ್ಸೆ ಭಾಗದ ಹಕ್ಕಿದೆ ಎಂದರೆ ಈಗಾಗಲೇ ನನ್ನ ತಾತ ಸಿದ್ದಯ್ಯನ 5 ಜನ ಮಕ್ಕಳಿಗೆ ಭಾಗ ಆಗಿದೆ ಎಂದು ನುಡಿಯುತ್ತಾರೆ. ಸಿದ್ದಯ್ಯ ಅವರಿಗೆ 5 ಜನ ಮಕ್ಕಳು ಎಂದು ಯಾವ ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಆರ್.ಟಿ.ಸಿ.ಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆರ್.ಟಿ.ಸಿ.ಗಳನ್ನು ಹೊರತುಪಡಿಸಿ ಅವರಿಗೆ 5 ಜನ ಮಕ್ಕಳು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

9. ಈ ದಾವದಲ್ಲಿ ಸಣ್ಣತಮ್ಮಯ್ಯ ಮತ್ತು ಅವರ ಮಕ್ಕಳು, ನಾಗರಾಜಯ್ಯ ಅವರ ಮೊಮ್ಮಗ ಯುವರಾಜ, ಚೇತು, ಪುಟ್ಟರಾಜಯ್ಯನ 5 ಜನ ಗಂಡು ಮಕ್ಕಳಾದ ಸಿದ್ದಯ್ಯ, ಚಂದ್ರ, ಮಹೇಶ, ಮಾರುತಿ, ದಿವಂಗತ ರಾಜು ಹಾಗೂ ಕುನ್ನಯ್ಯನ ಮಕ್ಕಳಾದ ಕರಿಯಯ್ಯ ಮತ್ತು ಮಲ್ಲಿಕ ಇವರುಗಳನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

10. ದಾವ ಆಸ್ತಿಗಳಲ್ಲಿ ನನ್ನ ತಾತ ಹಾಗೂ ಮುತ್ತಾತ ಸಿದ್ದಯ್ಯ ಮತ್ತು ತಿಮ್ಮಯ್ಯರವರುಗಳಿಗೆ ತಲಾ ಅರ್ಧ ಹಿಸ್ಸಾ ಹಕ್ಕಿದೆ ಎಂದರೆ ಸುಳ್ಳು. ನಾನು ಈ ದಾವದಲ್ಲಿ ಯಾವಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಓದು-ಬರಹ ಬರದೆ ಇರುವುದರಿಂದ ಹೇಳಲು ಆಗುವುದಿಲ್ಲ. ನನ್ನ ತಾತ, ಮುತ್ತಾತ ಹಾಗೂ ಚಿಕ್ಕ ತಾತ ಇವರುಗಳ ಎಲ್ಲಾ ವಿಚಾರಗಳು ನನ್ನ ತಂದೆಗೆ ತಿಳಿದಿದೆ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾರೆ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದು ಅವರು ನನಗೆ ಸುಳ್ಳು ಜಿಪಿಎ ನೀಡಿ ಸುಳ್ಳು ಸಾಕ್ಷಿ ನುಡಿಸುತ್ತಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಆರೋಗ್ಯವಂತರಾಗಿದ್ದು, ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ಅವರೆ ನೋಡಿಕೊಳ್ಳುತ್ತಾರೆ ಎಂದರೆ ಸುಳ್ಳು. ನನ್ನ ತಂದೆಗೆ ಹುಷಾರಿಲ್ಲ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

11. ವಾದಿಗಳಿಗೆ ಸೇರಬೇಕಾದ ಅರ್ಧ ಹಿಸ್ಸೆಯನ್ನು ಲಪಾಟಾಯಿಸಬೇಕೆಂಬ ಉದ್ದೇಶದಿಂದ ಸಿದ್ದಯ್ಯನಿಗೆ 5 ಜನ ಮಕ್ಕಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಯ್ಯ ಅವರಿಗೆ ಕೇವಲ 4 ಜನ ಮಕ್ಕಳು ಅವರ ತಮ್ಮ ತಿಮ್ಮಯ್ಯನಿಗೆ ಕಿವುಡಯ್ಯ ಎಂಬ ಏಕೈಕ ಮಗ ಎಂದರೆ ಸುಳ್ಳು. 1 ನೇ ವಾದಿ ಸದರಿ ಕಿವುಡಯ್ಯನ ಹೆಂಡತಿ, ಉಳಿದ ವಾದಿಗಳು ಕಿವುಡಯ್ಯನ ಮಕ್ಕಳು ಎಂದರೆ ಸುಳ್ಳು. ವಾದಿಯರ ಆಸ್ತಿಯನ್ನು ಲಪಾಟಾಯಿಸಲು ಪ್ರತಿವಾದಿಗಳಾದ ನಾವೆಲ್ಲಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.